ಮೊದಲಿಗೆ ಮೂವರು ಕಥಾನಾಯಕಿಯರನ್ನು ಪರಿಚಯಿಸಿಕೊಳ್ಳಿ. ಪರಿಚಯದ ಬಳಿಕ ಒಂದು ನಿಟ್ಟುಸಿರು ಹೊರಹೊಮ್ಮುತ್ತದೆ ಹಾಗೂ ಮೆಚ್ಚುಗೆಯ ಭಾವ ಮನಸ್ಸು ತುಂಬುತ್ತದೆ.

## ಸಾವಿನಲ್ಲೂ ಹೊಸ ಹುಟ್ಟು!

ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕಿನ ಕೊಡಚೆರುವು ಗ್ರಾಮದ ಚೈತ್ರಾ, ಕಾಲೇಜು ಉಪನ್ಯಾಸಕಿಯಾಗಿದ್ದವರು. ಮದುವೆಯೂ ನಿಶ್ಚಿತವಾಗಿತ್ತು. ಹಸೆಮಣೆ ಏರುವ ಮುನ್ನಾ ದಿನದ ಆರತಕ್ಷತೆಯಂದು, ವೇದಿಕೆಯಲ್ಲೇ ತಲೆಸುತ್ತು ಬಂದು ಕುಸಿದುಬಿದ್ದರು. ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಚೈತ್ರಾ ಅವರನ್ನು ದಾಖಲಿಸಿದ್ದು ಉಪಯೋಗಕ್ಕೆ ಬರಲಿಲ್ಲ. ಮೆದುಳು ನಿಷ್ಕ್ರಿಯಗೊಂಡಿದೆ ಎಂದು ವೈದ್ಯರು ಘೋಷಿಸಿದರು. ಅಲ್ಲಿಗೆ ಚೈತ್ರಾ ಅವರ ಜೀವನ ಕೊನೆಗೊಂಡಿತು. ಸಂತೋಷದಿಂದ ನಳನಳಿಸುತ್ತಿದ್ದ ಮನೆಯಲ್ಲಿ ಸಾವಿನ ಸೂತಕ ತುಂಬಿಕೊಂಡಿತು. ದುಃಖದ ಮಡುವಿನಲ್ಲಿದ್ದರೂ ಮನೆಯವರು ವಿವೇಚನೆ ಕಳೆದುಕೊಳ್ಳಲಿಲ್ಲ. ಚೈತ್ರಾ ಅವರ ಹೃದಯ, ಕಿಡ್ನಿ ಸೇರಿದಂತೆ ಏಳು ಅಂಗಾಂಗಗಳನ್ನು ದಾನ ಮಾಡುವ ಮೂಲಕ, ಅಗಲಿದ ಜೀವಕ್ಕೆ ಸಾರ್ಥಕತೆ ದೊರಕಿಸಿಕೊಟ್ಟರು.



## ಏಳು ಜೀವಗಳ ರಕ್ಷಣೆ

ಚಿಕ್ಕಮಗಳೂರಿನ ರಕ್ಷಿತಾ ಅವರ ಕಥೆ ಕೇಳಿ. ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಸೋಮನಹಳ್ಳಿ ತಾಂಡ್ಯಾದ ಕಾಲೇಜು ವಿದ್ಯಾರ್ಥಿನಿ, ಹದಿನೇಳು ವರ್ಷದ ಈ ರಕ್ಷಿತಾ. ಅದೊಂದು ದಿನ ಎಂದಿನಂತೆ ಕಾಲೇಜಿಗೆ ಹೊರಟವರು, ಬಸ್ ಏರಲು ಹೋಗಿ ಆಯತಪ್ಪಿ ಬಿದ್ದರು. ತಲೆಗೆ ತೀವ್ರವಾಗಿ ಪೆಟ್ಟು ಬಿದ್ದು, ಜಿಲ್ಲಾಸ್ಪತ್ರೆಗೆ ತಕ್ಷಣ ದಾಖಲಿಸಿದರೂ ಪ್ರಯೋಜನವಾಗಲಿಲ್ಲ. ಮತ್ತದೇ ಮೆದುಳು ನಿಷ್ಕ್ರಿಯಗೊಂಡ ಕಥೆ. ರಕ್ಷಿತಾ ಅವರ ಮನೆಯವರು ಕೂಡ ಸಾವಿನ ದುಃಖದಲ್ಲೂ ಮಾನವೀಯತೆ ಮೆರೆದರು. ರಕ್ಷಿತಾ ಅವರೇನೋ ತೀರಿಕೊಂಡರು; ಆದರೆ, ಅಂಗಾಂಗ ದಾನದ ಮೂಲಕ ಅವರು ಏಳು ಮಂದಿಯ ಜೀವ ರಕ್ಷಿಸಿದ್ದರು.



## ಸಾರ್ಥಕ ಕವನಾ

ಹಾವೇರಿ ಜಿಲ್ಲೆಯ ಕವನಾ ಅವರ ಸಾರ್ಥಕ ಬದುಕಿನ ಕಥೆ ಕೇಳಿ. ಶಿವಮೊಗ್ಗ ಜಿಲ್ಲೆಯ ಹೊನ್ನಾಳಿಯಲ್ಲಿ ನಡೆದ ರಸ್ತೆ ಅಪಘಾತದಲ್ಲಿ ಕವನಾ ತೀವ್ರವಾಗಿ ಗಾಯಗೊಂಡಿದ್ದರು. ಮಂಗಳೂರಿನ ಆಸ್ಪತ್ರೆಗೆ ದಾಖಲಿಸಿದರೂ, ಮೆದುಳು ನಿಷ್ಕ್ರಿಯಗೊಂಡ ಕಾರಣ ವೈದ್ಯರು ಸಾವನ್ನು ಘೋಷಿಸಿದರು. ಮೃತರ ಕಿಡ್ನಿ, ಹೃದಯ, ಚರ್ಮ ಮುಂತಾದ ಅಂಗಾಂಗಗಳನ್ನು ಮನೆಯವರು ದಾನ ಮಾಡಿದರು. ಅಂಗಾಂಗ ದಾನದ ಮೂಲಕ, ಕವನಾ ಎನ್ನುವ ಹೆಸರು ನಿಜ ಅರ್ಥದಲ್ಲಿ ಸಾರ್ಥಕವಾಯಿತು.



ಬದುಕಿನ ಸಾರ್ಥಕತೆಯನ್ನು ವ್ಯಕ್ತಿಯ ಸಾಧನೆ ಮತ್ತು ವ್ಯಕ್ತಿತ್ವದ ಮೂಲಕ ಗುರ್ತಿಸಲಾಗುತ್ತದೆ. ಆದರೆ, ಚೈತ್ರಾ, ರಕ್ಷಿತಾ ಹಾಗೂ ಕವನಾ ಅವರ ಬದುಕಿನ ಸಾರ್ಥಕತೆಯನ್ನು ಸಮಾಜ ಗುರ್ತಿಸುತ್ತಿರುವುದು ಅಂಗಾಂಗ ದಾನದ ಮೂಲಕ. ತೊಡೆಯ ಮಾಂಸವನ್ನು ಕತ್ತರಿಸಿಕೊಟ್ಟ ಶಿಬಿ ಚಕ್ರವರ್ತಿ, ಕಣ್ಣುಗಳನ್ನು ಶಿವನಿಗೆ ಅರ್ಪಿಸಿದ ಬೇಡರ ಕಣ್ಣಪ್ಪನ ಕಥೆಗಳು ನಮಗೆ ಗೊತ್ತು. ಇಲ್ಲಿನ ಕಥಾನಾಯಕಿಯರ ಬದುಕು ಶಿಬಿ–ಕಣ್ಣಪ್ಪನಿಗಿಂತಲೂ ಯಾವುದೇ ರೀತಿಯಲ್ಲೂ ಕಡಿಮೆಯದಲ್ಲ. ಈ ನಾಯಕಿಯರ ಕುಟುಂಬದ ಔದಾರ್ಯವೂ ಕಡಿಮೆಯಾದುದಲ್ಲ.

ಅಂಗಾಂಗ ದಾನ ಮಾಡಿದ ಮೂವರು ಹೆಣ್ಣುಮಕ್ಕಳ ಮೇಲಿನ ಪ್ರಸಂಗಗಳು ಉದಾಹರಣೆಗಳಷ್ಟೆ. ಸಾವಿನ ನಂತರ ಅಂಗಾಂಗ ದಾನ ಮಾಡಿದ ಇಂತಹ ಹಲವಾರು ಪ್ರಕರಣಗಳು ಇತ್ತೀಚಿನ ದಿನಗಳಲ್ಲಿ ದಾಖಲಾಗುತ್ತಿವೆ. ಸಾವಿನ ನಂತರವೂ ಬೇರೆಯವರ ಬಾಳಿನಲ್ಲಿ ಬೆಳದಿಂಗಳು ಚೆಲ್ಲುವವರು ಮಾನವೀಯ ಕಥನಗಳನ್ನು ಸಮಾಜ ಕಾಣುತ್ತಿದೆ. ಒಂದೂವರೆ ವರ್ಷದ ಹಿಂದೆ ರಸ್ತೆ ಅಪಘಾತದಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿ ಅಸುನೀಗಿದ ಚಿತ್ರನಟ ಸಂಚಾರಿ ವಿಜಯ್ ಅವರ ಅಂಗಾಂಗಗಳನ್ನು ದಾನ ಮಾಡಲಾಗಿತ್ತು. ಪುನೀತ್ ರಾಜ್‌ಕುಮಾರ್ ಅವರ ಅಕಾಲಿಕ ಸಾವಿನ ಬಳಿಕ, ಅವರ ಕಣ್ಣುಗಳನ್ನು ದಾನ ಮಾಡಲಾಗಿತ್ತು. ಅವರಿಗೆ ಮೇಲ್ಪಂಕ್ತಿಯಾಗಿ ವರನಟ ರಾಜ್‌ಕುಮಾರ್ ಅವರ ನೇತ್ರದಾನ, ರಾಜ್ಯದಲ್ಲಿ ಕಣ್ಣುಗಳನ್ನು ದಾನ ಮಾಡಲು ಸಹಸ್ರಾರು ಜನರಿಗೆ ಪ್ರೇರಣೆ ಒದಗಿಸಿದ್ದನ್ನೂ ನೆನಪಿಸಿಕೊಳ್ಳಬೇಕು.

ಮೆದುಳು ನಿಷ್ಕ್ರಿಯವಾಗುವುದಕ್ಕೂ ಅಂಗಾಂಗ ದಾನಕ್ಕೂ ನೇರವಾದ ಸಂಬಂಧವಿದೆ. ಬ್ರೈನ್ ಡೆಡ್ ಆದ ವ್ಯಕ್ತಿಯ ಕಣ್ಣು, ಹೃದಯ, ಕಿಡ್ನಿ, ಪಿತ್ತಜನಕಾಂಗ, ಶ್ವಾಸಕೋಶ ಮುಂತಾದ ಅಂಗಗಳನ್ನು ಸಾವಿನ ಬಳಿಕ ದಾನ ಮಾಡಲು ಸಾಧ್ಯವಿದೆ. ಈ ಅಂಗಗಳನ್ನು ಪಡೆಯುವ ಮೂಲಕ ಮರುಹುಟ್ಟು

